(*c*) No.

(*d*) The matter is under invetigation.

ಶ್ರೀ ಎಂ. ಲಂಗೇಗೌಡ.—ಡಿಸೆಂಬರ್ 4ನೆಯ ತಾರೀಖು ಮಿನಿಸ್ಟರು ಹಾಜರಿದ್ದು, if it is technically feasible, ಕೆರೆ ಕೆಲಸ ತೆಗೆದುಕೊಳ್ಳೋಣವೆಂದು ಹೇಳಿ ಬರೆದದ್ದು ನಾನೂ ನೋಡಿದ್ದೇನೆ, ಅವರೂ ಒಪ್ಪಿಕೊಂಡಿದ್ದಾರೆ.

†Sri H. M. CHANNABASAPPA.—It is not on 4th September 1959 that I visited Kanakapura area but it is on 4th November 1959 that I toured Kanakapura Taluk. At that time, the question was represented to me and I did say if it is administratively and technically feasible, it may be taken up. Now, the difficulty is that though it is technically feasible, there appears to be some administrative difficulties.

ಶ್ರೀ ಎಂ. ಲಂಗೇಗೌಡ.—ಈಗ administrative difficulties ಎಂದು ಹೇಳಿದ್ದೀರಿ. ಅವುಗಳಿಗೆ ಅಧಾರವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನೂ ಇಲ್ಲ. ಇದು ಇರ್ರಿಗೇಷನ್ ಟ್ಯಾಂಕ್ ಅಲ್ಲ. ಕುಡಿಯುವ ನೀರಿಗೂ ತೊಂದರೆಯಾಗುತ್ತಾ ಇದೆಯೆಂದು ಜನಗಳು ರೆಪ್ರೆಸೆಂಟೇಷನ್ ಕೊಟ್ಟಿದಾರೆ. ಮೂರು ಅಡಿ ಕೆಳಗೆ ತೂಬು ಇಟ್ಟರೆ ದನಗಳಿಗೆ ಅನುಕೂಲವಾಗುತ್ತದೆ. ಮೂರು ಅಡಿ ಮೇಲೆ ಇಟ್ಟರೆ ಇರ್ರಿಗೇಷನ್ನಿಗೆ ಅನುಕೂಲವಾಗುತ್ತದೆ. ಅದನ್ನು ಎಕ್ಷ್ಪಾಮಿನ್ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಲಂಗೇಗೌಡ.—ತಾವು ಅಲ್ಲಿಗೆ ಬರುವುದಕ್ಕೆ ಮೊದಲೇ ತೂಬು ಇಡಬೇಕೆಂಬ ರೆಕಾರ್ಡ್ ಪತ್ರ ಇರಲಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—The Government are fully aware. The Executive Engineer has opined that it is feasible to put a sluice 3 feet higher up. But how many acres will be irrigated and what quantity of water can be impounded will have to be examined. Immediately after it is over, feasibility will be examined early and implemented.

ಶ್ರೀ ಎಂ. ಲಂಗೇಗೌಡ.—ಸಂಬಂಧಪಟ್ಟ ರಿಕಾರ್ಡ್ ಇಲ್ಲ. ತಾವು, ಸರ್ಕಾರದಿಂದ ಅದರೂ ಸರಿ, ರಿಮೆಂಬರ್ ಕಳುಹಿಸಿದರೂ ಕೂಡ, ಒರಿಜಿನಲ್ ರಿಕಾರ್ಡ್ ಒಂದೂ ಇಲ್ಲ ಎನ್ನುವುದು ಸರ್ಕಾರದ ನಿಗಾಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಕಾರ್ಡ್ ಇಲ್ಲದೆ ಇದ್ದರೆ, ಉತ್ತರ ಬರುತ್ತದೆಯೇ ? ಬರುತ್ತಿರಲಿಲ್ಲ. ತಮಗೆ ಇನ್‌ಫರ್‌ಮೇಷ್ಟ್ ಕೊಟ್ಟಿರುವುದರಿಂದ ರಿಕಾರ್ಡ್ ಇದೆಯೆಂದು ಊಹೆ ಮಾಡುತ್ತೇನೆ. ಇದನ್ನು ವಿಚಾರ ಮಾಡುತ್ತೇನೆ.

RELEASE OF FOREST AREA FOR CULTIVATION IN FORESTS OF BANGARPET TALUK.

*Q.—68. Sri E. NARAYANA GOWDA (Bangarpet).—

Will the Government be pleased to state.—

(*a*) the extent of forest area are released for cultivation in Puthunuru and Thoppanahally forests in Bangarpet Taluk for the last five years ;

(*b*) the extent of acreage in the above forest areas that is unfit for afforestation ;

(*c*) the opinion of the Government in the matter of releasing the above area for cultivation ?

A.—Sri K. F. PATIL (Minister for Forests and Transport).—

(*a*) (i) It should be Muthunur but not Puthunuru. The extent of State Forests in Muthunur and Thoppanahally is as follows :—

Muthunur	*Acres.*
(Kamasandra State Forest—Block IV.)	4,837-00
Thoppanahally.	
Kamasandra State Forest.	
Block I	3,948-00
Block II	4,368-00
Block V	1,208-00
Block VI	590-00
Total ...	10,114-00

(ii) No lands have been released out of the above State Forests during the last five years.

(*b*) *Kamasandra State Forest*	*Acres.*
Block IV	1,209-00
Block I, II, V and VI ...	2,528-00
Total ...	3,737-00

(*c*) Government have no intention to release the above area for cultivation.

ಶ್ರೀ ಇ. ನಾರಾಯಣ ಗೌಡ.—3,737 ಎಕರೆ ಫಾರೆಸ್ಟಿಗೆ ನಾರಾಯಕ್ ಎಂದು ಒಪ್ಪಿ ಕೊಂಡಿದ್ದೀರಿ. ಇದನ್ನು ಸಾಗುವಳಿಗೆ ಕೊಡಬೇಕೆಂದು ಎಷ್ಟು ಅರ್ಜಿಗಳು ಬಂದಿವೆ.

ಶ್ರೀ ಕೆ. ಎಫ್. ಪಾಟೀಲ್.—ತಾವು ಕೋಲಾರ ಜಿಲ್ಲೆಯವರೇ ಇದ್ದೀರಿ. ಕೋಲಾರ ಜಿಲ್ಲೆಯಲ್ಲ ಕಲ್ಲನ ಗುಡ್ಡಗಳಿವೆ ಎಂದು ಕಲ್ಪನೆ ಇಟ್ಟುರೆ, ಆಫಾರೆಸ್ಟೇಷನ್ನಿಗೆ ಬರುವುದಿಲ್ಲ. ಬಂದಾ ಕ್ಷಣಕ್ಕೆ, ಅಗ್ರಿಕಲ್‌ಚರ್ರಿಗೆ ಬರುತ್ತದೆ ಎಂದು ಅರ್ಥವಲ್ಲ. ಆ ಭೂಮಿ ಅಗ್ರಿಕಲ್‌ಚರ್ರಿಗೂ ಬರುವಹಾಗಿಲ್ಲ, ಫಾರೆಸ್ಟಿಗೂ ಬರುವ ಹಾಗಿಲ್ಲ.

ಶ್ರೀ ಇ. ನಾರಾಯಣ ಗೌಡ.—3,737 ಎಕರೆಯಲ್ಲ, ಅಗ್ರಿಕಲ್‌ಚರಲ್ ಲ್ಯಾಂಡ್ ಎಷ್ಟಿದೆ?

ಶ್ರೀ ಕೆ. ಎಫ್ ಪಾಟೀಲ್.—ಸರ್ವೆ ಮಾಡಲಲ್ಲ. ಗುಡ್ಡದ ಪಕ್ಕದಲ್ಲಿ 2-4-5 ಎಕರೆ ಸಿಕ್ಕಿರಬಹುದು. ಸರ್ವೆಮಾಡಿ ಕೊಡುವುದಕ್ಕೆ ಆಗಿಲ್ಲ.

ಶ್ರೀ ಇ. ನಾರಾಯಣಗೌಡ.—ಈಗ ಮರಗಳು ಬೆಳೆಯದೇ ಇರತಕ್ಕ ಜಾಗವನ್ನು ಮುಂದೆ ಮರ ಬೆಳೆಸಲು ಅವಕಾಶವಿಲ್ಲವೆಂಬುದಾಗಿ ಕಂಡುಬಂದಲ್ಲಿ ಅಂಥ ಪ್ರದೇಶವನ್ನು ವ್ಯವಸಾಯಕ್ಕೆ ಬಿಡಿಸಿಕೊಡಲು ಕೊಂದರೆಯೇನಿದೆ?

ಶ್ರೀ ಕೆ. ಎಫ್. ಪಾಟೀಲ್.—ಆ ಅರಣ್ಯಪ್ರದೇಶವನ್ನು ಬೇಸಾಯಕ್ಕೆ ಕೊಡಲೇಬಾರದೆಂದು ಸರ್ಕಾರದ ಅಭಿಪ್ರಾಯ.